*13ರಲ್ಲಿ 2ನೇ ಪುಟ*

**ನಮ್ಮ ಮನೆ... ಭೂಮಿಯನ್ನು ಗುಣಪಡಿಸು**

ಕನಿಷ್ಠ ನಾಣ್ಯದ ಒಳ-ಕೂಟದ / ಸಂಗ್ರಹಣೆಯಲ್ಲಿನ ಆರಾಧನೆಯ ಅನ್ಯೋನ್ಯತೆಯು ಕನಿಷ್ಠ ನಾಣ್ಯದ ಅನ್ಯೋನ್ಯತೆಗೆ ಅಂತರ್ರಾಷ್ಟ್ರೀಯ ಸಮಿತಿಯಿಂದ (ಐಸಿಎಫ್ಎಲ್ಸಿ) ಸಲಹೆಮಾಡಲ್ಪಟ್ಟ ಮಾರ್ಗದರ್ಶಿಯಾಗಿ ಒಂದು ಕಾಣಿಕೆಯಾಗಿರುತ್ತದೆ. ಸಂಗೀತಗಳನ್ನು ಮತ್ತು ಸಂಪರ್ಕಿಸುವ ವಿವಿಧ ಮಾರ್ಗಗಳನ್ನು (ಉದಾ: ನಾಟಕೀಕರಣ, ಸಂದೇಶ, ನಿರೂಪಣೆ, ಚಿಕ್ಕ ಗುಂಪುಗಳ ಚರ್ಚೆ) ಆಯ್ಕೆಮಾಡಿಕೊಳ್ಳಲು ಮಹಿಳೆಯರ ಗುಂಪುಗಳಿಗೂ ಮತ್ತು ಸಭೆಗಳಿಗೂ ಸ್ಥಳಾವಕಾಶವಿರುತ್ತದೆ. ಅದರೊಂದಿಗೆ, ಈ ಆರಾಧನೆಯು ಹೆಚ್ಚಿನ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಹತ್ತು ವಿವಿಧ ನಾಯಕರ ಹಾಗೂ ಸ್ವರಗಳವರೆಗೆ ಒಳಪಡಿಸಿಕೊಳ್ಳಲು ಅವಕಾಶವಿರುತ್ತದೆ.

ನಮ್ಮ ಪ್ರಾದೇಶಿಕ ಸಾರ್ವತ್ರಿಕ ಪಾಲುದಾರರು, ಪಂಗಡದ ಪಾಲುದಾರರು, ಮಹಿಳೆಯರ ಗುಂಪುಗಳು ಮತ್ತು ಸ್ಥಳಿಯ ಸಭೆಯವರು ಒಳ-ಕೂಟದ / ಸಂಗ್ರಹಣೆಯಲ್ಲಿನ ಆರಾಧನೆಗಳನ್ನು ವಿವಿಧ ಗುಂಪುಗಳ ಅಗತ್ಯತೆಗಳಿಗೆ ತಕ್ಕಂತೆ ವರ್ಷದುದ್ದಕ್ಕೂ ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಒಳ-ಕೂಟದ / ಸಂಗ್ರಹಣೆಯಲ್ಲಿನ ಆರಾಧನೆಯನ್ನು ಪ್ರತೀ ಬೇಸಿಗೆಯಂದು ಪ್ರಕಾಶಪಡಿಸಿ ಹಂಚಲಾಗುತ್ತದೆ.

ಐಸಿಎಫ್ಎಲ್ಸಿ ಒಳ-ಕೂಟದ / ಸಂಗ್ರಹಣೆಯಲ್ಲಿನ ಆರಾಧನೆಯ ಕುರಿತು ನಿಮ್ಮ ಪ್ರತಿಕ್ರಿಯೆಯನ್ನೂ ಮತ್ತು ಅದರೊಂದಿಗೆ ವೈಯಕ್ತಿಕ ಕಿರುಕತೆಯನ್ನೂ ಕಥೆಗಳನ್ನೂ ಮತ್ತು ನಿಮ್ಮ ಆರಾಧನೆಯ ಭಾವಚಿತ್ರವನ್ನೂ ಶ್ರೇಷ್ಠವಾಗಿ ಎದುರುನೋಡುತ್ತದೆ. ಅದರ ಜೊತೆಗೆ, ಸಾಂಕ್ರಾಮಿಕದ ಸಮಯದಲ್ಲಿ ಸೇರಿ ಬರುವ ಎಲ್ಲರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವದಕ್ಕಾಗಿ ಅವರವರ ಪ್ರಾಂತ್ಯದಲ್ಲಿನ ಇತ್ತೀಚಿನ ಆರೋಗ್ಯ ಮತ್ತು ಸುರಕ್ಷತೆ ಮಾರ್ಗಸೂಚಿಗಳನ್ನು ಪಾಲಿಸುವಂತೆ ನಾವು ಎಲ್ಲಾ ಗುಂಪುಗಳನ್ನು ಪ್ರೋತ್ಸಾಹಿಸುತ್ತೇವೆ. ನಿಮ್ಮ ಯಾವದೇ ಪ್ರತಿಕ್ರಿಯೆಯನ್ನು icflcph@gmail.com ಗೆ ಕಳುಹಿಸಿರಿ.

*13ರಲ್ಲಿ 3ನೇ ಪುಟ*

**ಮುನ್ನುಡಿ**

ಸಮುದಾಯವು ಒಟ್ಟಿಗೆ ಸೇರಿಬರುವದನ್ನು ಸಂಕೇತಿಸಲು ಚೈಮ್ಸ್, ಘಂಟೆಗಳು, ರೇನ್‌ಮೇಕರ್ಸ್, ತಾಳಗಳು, ಕಂಸಾಳೆ ಇಲ್ಲವೆ ಇನ್ನಾವುದೋ ವಾದ್ಯ ಸಂಗೀತವನ್ನು ಉಪಯೋಗಿಸಬಹುದು. (ಸಾಧ್ಯವಾದರೆ ಪ್ರಕೃತಿಯನ್ನು ಅನುಭವಿಸಲು ಈ ಚಟುವಟಿಕೆಯನ್ನು ಉದ್ಯಾನದಲ್ಲಿ, ಕಡಲತೀರದಲ್ಲಿ, ಶಿಬಿರದ ಸ್ಥಳದಲ್ಲಿ ಅಥವಾ ಅರಣ್ಯದಲ್ಲಿ ಮಾಡಬಹುದು).

ಸಂಗೀತ ವಾದ್ಯಗಳು ನುಡಿಸಲ್ಪಡುತ್ತಿರುವಾಗ ಭಾಗವಹಿಸುವವರಲ್ಲಿ ಆಯ್ದುಕೊಳ್ಳಲ್ಪಟ್ಟವರು ನೀರು, ಬೆಂಕಿ, ಮಣ್ಣು, ತರಕಾರಿಗಳು, ಹಣ್ಣುಗಳು, ಅಕ್ಕಿ, ಗಿಡಗಳು, ಹೂವುಗಳು, ಕಟ್ಟಿಗೆ/ಬಿದಿರಿನ ಶಿಲುಬೆಯನ್ನು ಅಥವಾ ದೇವರ ಸೃಷ್ಟಿಯನ್ನು ಸಾಂಕೇತಿಕವಾಗಿ ತೋರಿಸುವ ಬೇರೆ ಯಾವದೋ ವಸ್ತುವನ್ನು (ಇದೇ ಕ್ರಮದಲ್ಲಿರಬೇಕಾಗಿಲ್ಲ) ನೃತ್ಯ ಮಾಡುವದರ ಮೂಲಕ ಯಜ್ಞವೇದಿ ಅಥವಾ ಆರಾಧನೆಯ ಮಧ್ಯಕ್ಕೆ ತರುವರು.

**ಸ್ವಾಗತ ಮತ್ತು ಶುಭಾಶಯಗಳು**

**ಆರಾಧನೆಗೆ ಕರೆ**

**ಧರ್ಮಾಚರಣೆ ನಡಿಸುವವರು:** ಅನಂತರ ದೇವರು – ಆಕಾಶದ ಕೆಳಗಿರುವ ನೀರೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಕೊಳ್ಳಲಿ, ಒಣನೆಲವು ಕಾಣಿಸಲಿ ಅಂದನು; ಹಾಗೆಯೇ ಆಯಿತು. ದೇವರು ಒಣನೆಲಕ್ಕೆ ಭೂಮಿಯೆಂದೂ ಜಲಸಮೂಹಕ್ಕೆ ಸಮುದ್ರವೆಂದೂ ಹೆಸರಿಟ್ಟನು. ಆತನು ಅದನ್ನು ಒಳ್ಳೇದೆಂದು ನೋಡಿದನು. ತರುವಾಯ ದೇವರು – ಭೂಮಿಯು ಹುಲ್ಲನ್ನೂ ಬೀಜಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳಿಸಲಿ; ಮತ್ತು ಬೀಜವುಳ್ಳ ಹಣ್ಣಿನ ಮರಗಳನ್ನೂ ಅವುಗಳ ಜಾತಿಗನುಸಾರವಾಗಿ ಹುಟ್ಟಿಸಲಿ ಎಂದು ಹೇಳಿದನು; ಹಾಗೆಯೇ ಆಯಿತು. ಭೂಮಿಯಲ್ಲಿ ಹುಲ್ಲು ಬೆಳೆಯಿತು; ತಮ್ಮ ತಮ್ಮ ಜಾತಿಯ ಪ್ರಕಾರ ಬೀಜಬಿಡುವ ಕಾಯಿಪಲ್ಯದ ಗಿಡಗಳು ಉಂಟಾದವು; ತಮ್ಮ ತಮ್ಮ ಜಾತಿಗನುಸಾರವಾಗಿ ಬೀಜವುಳ್ಳ ಹಣ್ಣಿನ ಮರಗಳು ಕಾಣಿಸಿದವು. ದೇವರು ಅದನ್ನು ಒಳ್ಳೇದೆಂದು ನೋಡಿದನು.

**ಜನರು: ದೇವರೇ, ನಮ್ಮ ಆಹಾರಕ್ಕೂ ನಮ್ಮ ಜೀವನಾಧಾರಕ್ಕೂ ಮೂಲಗಳಾಗಿರುವ ಭೂಮಿಸಾಗರಗಳ ಸೃಷ್ಟಿಕರ್ತನೇ ನಿನಗೆ ಸ್ತೋತ್ರವಾಗಲಿ. ತರಕಾರಿ ಹಣ್ಣುಗಳನ್ನೂ, ಮರಗಳನ್ನೂ, ಹೂವುಗಿಡಗಳನ್ನೂ ಮತ್ತು ಕಡಲ ಸಂಪನ್ಮೂಲಗಳಿಗೆ ಮೂಲವಾಗಿರುವ ಸಾಗರವನ್ನೂ ಸೃಷ್ಟಿಸಿದಾತನೇ ನಿನಗೆ ಸ್ತೋತ್ರ. ನಮ್ಮ ಸುತ್ತುಮುತ್ತಲೂ ನೋಡುವ ದೊಡ್ಡದಾಗಲಿ ಚಿಕ್ಕದಾಗಲಿ, ಜೀವಂತ ಅಥವಾ ನಿರ್ಜೀವದ ಪ್ರತಿಯೊಂದು ಆಕಾರ ಪ್ರತಿಯೊಂದು ಬಣ್ಣದವುಗಳೆಲ್ಲಾ ನಿನ್ನ ಸೃಷ್ಟಿಗಳೇ ಆಗಿವೆ.**

**ಧರ್ಮಾಚರಣೆ ನಡಿಸುವವರು:** ಆ ಮೇಲೆ ದೇವರು – ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ

*13ರಲ್ಲಿ 4ನೇ ಪುಟ*

ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು. ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು.

**ಜನರು: ಮಾನವಕುಲವನ್ನೂ ಭೂಮಿಯನ್ನೂ ಸೃಷ್ಟಿಸಿದ ನಮ್ಮ ಸೃಷ್ಟಿಕರ್ತನೇ ನಿನ್ನನ್ನು ವಂದಿಸಿ ಸ್ತುತಿಸುತ್ತೇವೆ ದೇವರೇ.**

**ಸ್ತುತಿಯ ಸಂಗೀತ:**

**ಧರ್ಮಾಚರಣೆ ನಡಿಸುವವರು:** ಮಾನವಕುಲದ ನಮ್ಮ ಸೃಷ್ಟಿಕರ್ತನೇ, ನಿನ್ನನ್ನು ವಂದಿಸುತ್ತೇವೆ ದೇವರೇ. ಇಡೀ ಲೋಕದಲ್ಲಿ ನೀನು ಸೃಷ್ಟಿಸಿದವುಗಳ ಮೇಲೆ ದೊರೆತನಮಾಡಬೇಕೆಂದು ಹಾಗೂ ನಿನ್ನಿಂದ ಬರುವ ಆಶೀರ್ವಾದಗಳನ್ನು ಸಮವಾಗಿ ನಡಿಸಲು ಮತ್ತು ಹಂಚಲು ನಮ್ಮನ್ನು ನೇಮಿಸಿರುತ್ತೀ. ನಾವಾದರೋ ದುರಾಸೆಯುಳ್ಳವರೂ ಸ್ವಾರ್ಥಿಗಳೂ ಆಗಿ ನಮ್ಮ ಕುರಿತಾಗಿ ಮಾತ್ರ ಯೋಚಿಸುವಂತವರಾಗಿಬಟ್ಟಿದ್ದೇವೆ. ನಿನ್ನ ಸೃಷ್ಟಿಯ ಮನೆವಾರ್ತೆಯವರಾಗಿರುವ ನಮ್ಮ ಜವಾಬ್ದಾರಿಯನ್ನು ನಾವು ಪರಿಪೂರ್ಣವಾಗಿ ಮರೆತುಬಿಟ್ಟಿದ್ದೇವೆ. ನಾವು ನಿನ್ನನ್ನು ನಿರಾಸೆಗೊಳಿಸಿದ್ದೇವೆ, ಓ ದೇವರೇ!

ಕೆಲವು ಕ್ಷಣಗಳ ಕಾಲ ಮೌನವಿದ್ದು ನಮ್ಮ ಮನೆಯಾಗಿರುವ ಈ ಭೂಮಿಯ ನಾಶನದ ಬಗ್ಗೆ ಚಿಂತನೆ

***ಕೆಲವು ಸಲಹೆಗಳು:***

***1. ನಮ್ಮ ಭೂಮಿಯ ನಾಶನವನ್ನು ಮತ್ತು ಜನರಿಗೂ ಭೂಮಿಗೂ ಹವಾಮಾನ ಬದಲಾವಣೆಯಿಂದಾಗುವ ಪರಿಣಾಮಗಳನ್ನು ವರ್ಣಿಸಲು ಚಿತ್ರಗಳನ್ನು ಅಥವಾ ಸಂಗೀತವನ್ನು ಉಪಯೋಗಿಸಬಹುದು.***

***2. ಭಾಗವಹಿಸುವವರು ತಮ್ಮ ಸಮುದಾಯಗಳಲ್ಲಿ ಗಮನಿಸಿದಂತೆಯೇ ಪ್ರಲಾಪಗಳನ್ನು, ಶೋಕಗೀತೆಯ ರೀತಿಯಲ್ಲಿ ಹಂಚಿಕೊಳ್ಳುವದು***

**ಧರ್ಮಾಚರಣೆ ನಡಿಸುವವರು:** ನಾವಾದರೋ ದುರಾಸೆಯುಳ್ಳವರೂ ಸ್ವಾರ್ಥಿಗಳೂ ಆಗಿ ನಮ್ಮ ಕುರಿತಾಗಿ ಮಾತ್ರ ಯೋಚಿಸುವಂತವರಾಗಿಬಟ್ಟಿದ್ದೇವೆ. ನಿನ್ನ ಸೃಷ್ಟಿಯ ಪ್ರೀತಿಯುಳ್ಳ ಮನೆವಾರ್ತೆಯವರಾಗಿರುವ ನಮ್ಮ ಜವಾಬ್ದಾರಿಯನ್ನು ನಾವು ಪರಿಪೂರ್ಣವಾಗಿ ಮರೆತುಬಿಟ್ಟಿದ್ದೇವೆ. ನಾವು, ನೀನು ಸೃಷ್ಟಿಸಿರುವ ಈ ಪ್ರಕೃತಿಯ ಭಾಗವಾಗಿದ್ದೇವೆಂಬದನ್ನೂ ಮರೆತುಬಿಟ್ಟಿದ್ದೇವೆ. ಮನುಷ್ಯಮಾತ್ರದವರಾದ ನಾವು ಇಲ್ಲದೆ ಪ್ರಕೃತಿಯು



ಉಳಿಯಬಹುದು, ಆದರೆ ಪ್ರಕೃತಿಯಿಲ್ಲದೆ ನಾವು ಇರಲು ಅಸಾಧ್ಯವಾಗಿದೆ. ಮನುಷ್ಯಮಾರದವರಾದ ನಾವು ನಿನ್ನನ್ನು ತೊರೆದುಬಿಟ್ಟಿದ್ದೇವೆ, ಓ ದೇವರೇ! ನಿನ್ನ ಕೃಪೆ ಕ್ಷಮಾಪಣೆಗಳಿಗಾಗಿ ನಾವು ಬೇಡಿಕೊಳ್ಳುತ್ತೇವೆ.

ಕೆಲವು ಕ್ಷಣಗಳ ಮೌನ

**ಜನರು: ಮತ್ತು ಈಗ ನಾವು ಹೇಳುವೆವು, "ಸಮಸ್ತ ಭೂನಿವಾಸಿಗಳು ನಡುಗಲಿ!" ಪ್ರಕೃತಿಯು ಹಾಳಾಗಿರುವದನ್ನು ಸಾಕ್ಷೀಕರಿಸಿದ್ದೇವೆ ಮತ್ತು ಅದು ಅಳುವದನ್ನು ಕೇಳಿದ್ದೇವೆ. ಪ್ರಗತಿಯ ಹೆಸರಿನಲ್ಲಿ ಶೋಷಣೆಗೊಳಗಾದವರ ಮತ್ತು ತುಳಿತಕ್ಕೊಳಗಾದವರ ಕೂಗನ್ನು ನಾವು ನೋಡಿ ಕೇಳಿಸಿಕೊಂಡಿದ್ದೇವೆ. ನಾವು ಸಿದ್ಧರಾಗಿದ್ದೇವೆ ಮತ್ತು ಈಗ ನಾವು ನ್ಯಾಯಕ್ಕಾಗಿ ಕೂಗುತ್ತಾ ಇದ್ದೇವೆ. ನಮ್ಮ ಮನೆಯಾಗಿರುವ ಈ ಭೂಮಿಗೆ ನ್ಯಾಯನೀತಿಯನ್ನು ಪುನಃಸ್ಥಾಪಿಸುವದಕ್ಕೋಸ್ಕರ ನಾವು ಜೊತೆಜೊತೆಯಾಗಿ ಕೆಲಸ ಮಾಡಲು ನಮ್ಮನ್ನು ಒಪ್ಪಿಸಿಕೊಡುವಂತೆ ಬಲಪಡಿಸು ಎಂದು ಪ್ರಾರ್ಥಿಸುತ್ತೇವೆ ಓ ದೇವರೇ.**

**ಪ್ರಾರ್ಥನೆ**

ದೇವರ ಸೃಷ್ಟಿಯು ಹಾಳಾಗುತ್ತಿರುವದು ಮತ್ತು ಅಪವಿತ್ರಗೊಳ್ಳುತ್ತಿರುವದು ಅಂತ್ಯವಾಗಲಿ, ಸೃಷ್ಟಿಯ ಫಲಗಳಿಗಿರುವ ಪ್ರವೇಶದ್ವಾರವು ಎಲ್ಲಾ ಜನಗಳ ನಡುವೆ ಸಮಾನವಾಗಿ ಹಂಚಲ್ಪಡಲಿ ಮತ್ತು ಸಮುದಾಯಗಳು ಹಾಗೂ ರಾಷ್ಟ್ರಗಳು ದೇವರಿಂದ ಕೊಡಲ್ಪಟ್ಟಿರುವ ಭೂಮಿಯ ಫಲಗಳಲ್ಲಿಯೂ ನೀರಿನಲ್ಲಿಯೂ ಜೀವನಾಂಶವನ್ನು ಎಂದು ಪ್ರಾರ್ಥಿಸೋಣ.

ಸರ್ವಶಕ್ತನಾದ ದೇವರೇ, ನೀನು ಈ ಲೋಕವನ್ನು ಸೃಷ್ಟಿಸಿದಿ ಮತ್ತು ಸಕಲ ಜನರನ್ನು ನಾವು ನಿನಗೆ ವಿಧೇಯತೆಯಲ್ಲಿ ಸೇವಿಸುವಂತೆ ಅದನ್ನು ನಮ್ಮ ಆರೈಕೆಗೆ ಕೊಟ್ಟಿರುತ್ತೀ. ಸೃಷ್ಟಿಯ ಸಂಪತ್ತನ್ನು ಜ್ಞಾನದಿಂದ ಉಪಯೋಗಿಸಲು ಮತ್ತು ಅದರ ಆಶೀರ್ವಾದಗಳು ಎಲ್ಲರಿಂದಲೂ ಹಂಚಿಕೊಳ್ಳಲ್ಪಟ್ಟಿರುವವೆಂದು ಖಚಿತಪಡಿಸಿಕೊಳ್ಳಲು ನಮಗೆ ಪ್ರೇರಿಸು. ನಿನ್ನ ಸಮೃದ್ಧಿಯಲ್ಲಿ ಭರವಸೆಯನ್ನಿಡುವದರ ಮೂಲಕ ಸಕಲ ಜನರು ಬಡತನ ಕ್ಷಾಮ ಮತ್ತು ದಬ್ಬಾಳಿಕೆಯಿಂದ ಸ್ವಾತಂತ್ರ್ಯವನ್ನು ಹೊಂದಲು ಸಾಮರ್ಥ್ಯರಾಗಲಿ. ಆಮೆನ್. (ಜೆಸುಯಿಟ್‌ರಿಸೋರ್ಸ್.ಆರ್ಗ್ ನಿಂದ ಪ್ರಾರ್ಥನೆ)

**ವೇದಪಾರಾಯಣ:** ಕೀರ್ತನೆ 96:11–13; ಕೀರ್ತನೆ 135:5–6; ರೋಮಾಪುರದವರಿಗೆ 8:19–23

**ಧರ್ಮಾಚರಣೆ ಅಥವಾ ಹಂಚಿಕೊಂಡ ಪ್ರತಿಬಿಂಬ:**
**ನಮ್ಮ ಮನೆಯಾಗಿರುವ ಭೂಮಿಯ ಆರೈಕೆಯಲ್ಲಿ ನಿಮ್ಮ ಎಫ್‌ಎಲ್‌ಸಿ ಕಥೆಯ ಮೇಲೆ**

**ಪರಿಗಣಿಸಲು ಸೂಚಿಸಲ್ಪಟ್ಟಿರುವ ಅಂಶಗಳು:**

1. ನಮ್ಮ ಅಸ್ವಸ್ಥ ಭೂಮಿಯನ್ನು ಗುಣಪಡಿಸಲು ಸಹಾಯಕವಾಗುವ ನಿಮ್ಮ ವೈಯಕ್ತಿಕ (ಅಥವಾ ನಿಮ್ಮ ಗುಂಪಿನ) ಕೊಡುಗೆ ಏನಾಗಿದೆ? ನಿರ್ದಿಷ್ಟವಾಗಿ ಹೇಳುವದಾದರೆ, ನಿಮ್ಮ ಸ್ವಂತ ಸಮುದಾಯದಲ್ಲಿ ಮತ್ತು ಸನ್ನಿವೇಶದಲ್ಲಿ ಭೂಮಿ ಮತ್ತು ಅದರ ನಿವಾಸಿಗಳನ್ನು ಕಾಳಜಿ ವಹಿಸಲು ನೀವು ಏನು ಮಾಡಬಹುದು?

2. ನಮ್ಮ ನೆಚ್ಚಿನ ಭೂಮಿಯನ್ನು ಮತ್ತು ಅದರಲ್ಲಿರುವ ಸಕಲ ಸೃಷ್ಟಿಯನ್ನು ಸಂಪೂರ್ಣ ಯೋಗಕ್ಷೇಮಕ್ಕೆ ಪುನಃಸ್ಥಾಪಿಸಲು ಸಹಾಯಮಾಡಬಹುದಾದ ಯಾವ ನಿರೀಕ್ಷೆಯ ಚಿನ್ಹೆಗಳು ನಿಮ್ಮ ಸುತ್ತಲೂ ನಿಮಗೆ ಕಾಣಿಸುವವು?

3. ಕನಿಷ್ಠ ನಾಣ್ಯದ ಅನ್ಯೋನ್ಯತೆಯನ್ನು ನ್ಯಾಯ ಮತ್ತು ಸಮಾಧಾನಕ್ಕಾಗಿ ಅದರ ಬದ್ಧತೆಯಲ್ಲಿ ಕೇವಲ ಮಾನವಕುಲಕ್ಕಾಗಿ ಮಾತ್ರವಲ್ಲದೆ ನಮ್ಮ ಮನೆಯಾಗಿರುವ ಭೂಮಿಗೋಸ್ಕರ ಒಂದು ಸಾರ್ವತ್ರಿಕ ಚಳುವಳಿಯನ್ನಾಗಿ ಬಲಪಡಿಸಲು ನೀವು ಅಥವಾ ನಿಮ್ಮ ಗುಂಪಿನವರು ಹೇಗೆ ಸಹಾಯಮಾಡಬಹುದು?

4. ಬದ್ಧತೆ–ಮಾಡಿಕೊಳ್ಳುದು: ನೀವು ಅಥವಾ ನಿಮ್ಮ ಗುಂಪಿನವರು ಮುಂದೆ ತಿಳಿಸಿರುವ ಸಂಗತಿಗಳ ಹಾಗೆ ಯಾವದೋ ಒಂದನ್ನು ಮಾಡುವದಾಗಿ ಬದ್ಧರಾಗಬೇಕು. ಅವು ಯಾವವೆಂದರೆ – ಭೂಮಿ ದಿನ ಕಾರ್ಯಕ್ರಮವನ್ನು ಸಂಘಟಿಸುವದು ಅಥವಾ ಭಾಗವಹಿಸುವದು, ಮರ ನೆಡುವದು, ಸ್ವಚ್ಛಗೊಳಿಸುವ ಕಾರ್ಯಕ್ರಮದಲ್ಲಿ ಸೇರಿಕೊಳ್ಳುವದು, ಪ್ರಕೃತಿಯ ನಡೆ–ಧ್ಯಾನ ಮಾಡುವದು, ಉದ್ಯಾನ ಮಾಡುವದು, ಮುಂತಾದವುಗಳು. ನಿಮ್ಮ ಬದ್ಧತೆಯನ್ನು ಒಂದು ಕಾರ್ಡ್‌ನ ಮೇಲೆ ಬರೆದು ನಿಮ್ಮ ಎಫ್‌ಎಲ್‌ಸಿ ಕಾಣಿಕೆಗಳೊಂದಿಗೆ ನಂತರ ನೀಡಿರಿ.

**ಸಂಗೀತ**

**ನಮ್ಮ ಎಫ್‌ಎಲ್‌ಸಿ ಕಥೆ (ನಿರ್ಬಂಧವಲ್ಲದ, ಅನುಬಂಧ 1ನ್ನು ನೋಡಿರಿ)**

**ಎಫ್‌ಎಲ್‌ಸಿ ಕನಿಷ್ಠ ನಾಣ್ಯ ಕಾಣಿಕೆಗಳು**

**ಎಫ್‌ಎಲ್‌ಸಿ ಕಾಣಿಕೆಗಳನ್ನು ಹಾಗೂ ಬದ್ಧತೆ ಕಾರ್ಡ್‌ಗಳನ್ನು ಆಶೀರ್ವದಿಸುವದು ಮತ್ತು ಎಫ್‌ಎಲ್‌ಸಿ ಚಳುವಳಿಗಾಗಿ ಪ್ರಾರ್ಥನೆ**

**ತ್ರಯೈಕ ದೇವರ ಸ್ತೋತ್ರ (ಡಾಕ್ಸಾಲಜಿ)**



ಸಮಸ್ತ ಜೀವರಾಶಿಯೇ,
ಸಮಸ್ತ ದೂತಸೈನ್ಯವೇ,

ಪಿತಾಪುತ್ರಾತ್ಮಕೆರಗಿ
ಅನಂತ ಸ್ತೋತ್ರ ಮಾಡಿರಿ. ಆಮೆನ್.

**ಬದ್ಧತೆಗೆ ಕರೆ:**

ನೀನು ಗಾಳಿಯನ್ನು ಉಸಿರಾಡಲು ಮತ್ತು ನೀರನ್ನು ಕುಡಿಯಲು ಸಾಧ್ಯವಾಗದಿದ್ದರೆ ನೀನು ಆಸಕ್ತಿ ಹೊಂದಿರುವ ಬೇರಾವುದೂ ಸಂಭವಿಸಲು ಸಾಧ್ಯವಿಲ್ಲ. ಇದನ್ನು ಬಿಟ್ಟು ಕೂತುಕೊಳ್ಳಬೇಡ. ಯಾವದಾದರೊಂದನ್ನು ಮಾಡು. ನಮ್ಮ ಗ್ರಹದ ಇತಿಹಾಸದಲ್ಲಿ ಅತೀ ಸಂದಿಗ್ದ ಕ್ಷಣದಲ್ಲಿ ವಿಧಿಯ ಆಕಸ್ಮಿಕವೋ ಎಂಬಂತೆ ನೀನು ಜೀವಂತವಾಗಿದ್ದೀ. – ಕಾರ್ಲ್ ಸೇಗನ್/ಸಗನ್ (Carl Sagan)

**ಜನರು:**

ಭೂಮಿಯ ಮತ್ತು ಸಕಲ ಜೀವದ ನಮ್ಮ ಅರಿವನ್ನು ನವೀಕರಿಸೋಣ.
ಭೂಮಿಗೆ/ನೆಲಕ್ಕೆ ನೂತನ ಜೀವವನ್ನು ತರಲು ನಾವು ಭೂಮಿಯೊಂದಿಗೂ ಪ್ರತಿಯೊಬ್ಬರೊಂದಿಗೂ ಸೇರಿಕೊಳ್ಳುತ್ತೇವೆ.

*13ರಲ್ಲಿ 8ನೇ ಪುಟ*

ನೀರುಗಳನ್ನು ಪುನಃಸ್ಥಾಪಿಸಲು
ಗಾಳಿಯನ್ನು ಉಲ್ಲಾಸಗೊಳಿಸಲು.

**ಮಹಿಳೆಯರು:**

ಅರಣ್ಯಗಳನ್ನು ನವೀಕರಿಸಲು
ಗಿಡಗಳನ್ನು ಆರೈಕೆ ಮಾಡಲು
ಸೃಷ್ಟೀಜೀವಿಗಳನ್ನು ಸಂರಕ್ಷಿಸಲು ನಾವು ಭೂಮಿಯೊಂದಿಗೂ ಪ್ರತಿಯೊಬ್ಬರೊಂದಿಗೂ ಸೇರಿಕೊಳ್ಳುತ್ತೇವೆ.

**ಪುರುಷರು:**

ಸಮುದ್ರಗಳನ್ನು ಆಚರಿಸಲು
ಸೂರ್ಯನ ಬೆಳಕಿನಲ್ಲಿ ಸಂತೋಷಿಸಲು
ನಕ್ಷತ್ರಗಳ ಹಾಡನ್ನು ಹಾಡಲು ನಾವು ಭೂಮಿಯೊಂದಿಗೂ ಪ್ರತಿಯೊಬ್ಬರೊಂದಿಗೂ ಸೇರಿಕೊಳ್ಳುತ್ತೇವೆ.

**ಯೌವನಸ್ಥರು ಮತ್ತು ಮಕ್ಕಳು:**

ಮಾನವ ಸಮುದಾಯವನ್ನು ಸೃಷ್ಟಿಸಲು
ನ್ಯಾಯ ಮತ್ತು ಸಮಾಧಾನವನ್ನು ಮತ್ತು, ಸಕಲ ಸೃಷ್ಟಿಯ ಸಮಗ್ರತೆಯನ್ನು ಬೆಂಬಲಿಸಲು
ನಾವು ಭೂಮಿಯೊಂದಿಗೂ ಪ್ರತಿಯೊಬ್ಬರೊಂದಿಗೂ ಸೇರಿಕೊಳ್ಳುತ್ತೇವೆ.

**ಜನರು:** ನಮ್ಮ ಮಕ್ಕಳೂ ಮುಂಬರುವ ಸಂತತಿಗಳೂ ಈ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲಿ ಎಂದು ನೆನಪಿಸಿಕೊಳ್ಳಲು ನಾವು ಭೂಮಿಯೊಂದಿಗೂ ಪ್ರತಿಯೊಬ್ಬರೊಂದಿಗೂ ಸೇರಿಕೊಳ್ಳುತ್ತೇವೆ.
ಭೂಮಿಯ ಸ್ವಸ್ಥತೆಗಾಗಿ ಮತ್ತು ಎಲ್ಲಾ ಜೀವನದ ನವೀಕರಣಕ್ಕಾಗಿ ನಾವು ಸಕಲ ಸೃಷ್ಟಿಯೊಂದಿಗೆ ಒಂದು ಪ್ರೀತಿಯ ರಹಸ್ಯವಾಗಿ ಸೇರಿಕೊಳ್ಳುತ್ತೇವೆ.

(ಯುನೈಟೆಡ್ ನೇಷನ್ಸ್ ಪರಿಸರ ಕಾರ್ಯಕ್ರಮ (ಯುಎನ್ಈಪಿ) ಕೇವಲ ಒಂದೇ ಭೂಮಿ ಇಂದ ಅಳವಡಿಸಲಾಗಿದೆ)

**ಮುಕ್ತಾಯದ ಸಂಗೀತ:** ಸ್ವಸ್ಥತೆಯ ಸಂಗೀತ

*13ರಲ್ಲಿ 9ನೇ ಪುಟ*

***(ಈ ವರೆಗೆಮ್ಮ ದೇವರು... ದಾಟಿಯಲ್ಲಿ ಹಾಡತಕ್ಕದ್ದು)***
ಸರ್ವೋನ್ನತಂಗೆ ಸ್ತೋತ್ರವು! ಆತಂಗೆ ಸ್ಥಿರ ಸೇವೆ
ಮಾಡೋಣ! ನಾವು ನಿತ್ಯವು ಸುಭದ್ರ ಬಾಳುತ್ತೇವೆ.
ನಮ್ಮಲ್ಲಿ ದೇವರೋಲ್ಮೆಯೂ ಅನಂತ ಸಮಾಧಾನವೂ;
ನಿಂತ್ಹೋಯಿತಲ್ಲ ಕಾಟ.

ಸಮಸ್ತಸೃಷ್ಟಿರಾಜನೇ, ಆಶ್ಚರ್ಯ ನಿನ್ನ ನೀತಿ!
ನಮ್ಮತಿಪ್ರಿಯ ತಂದೆಯೇ, ಅತ್ಯಂತ ನಿನ್ನ ಪ್ರೀತಿ!
ಅಶೋಧ್ಯ ನಿನ್ನ ಜ್ಞಾನವು; ಸಂಪೂರ್ಣ ನಿನ್ನ ಶಕ್ತಿಯು!
ನೀ ಒಳ್ಳೇ ಯಜಮಾನ!

ಶ್ರೀ ದೇವಪುತ್ರ ಯೇಸುವೇ, ನೀ ತಂದೇ ಪ್ರತಿಕಾಂತಿ!
ಪಾಪಾಬ್ಧಿಮಗ್ನ ಜನಕೆ, ನಿನ್ನಿಂದ ಬಂತು ಶಾಂತಿ.
ನೋಡೆಮ್ಮ ದುಃಖಸ್ಥಿತಿಯಂ! ತಾರಯ್ಯ ಹೃದಸುಖವಂ,
ನಮ್ಮಲ್ಲಿ ದಯವಿಟ್ಟು.

ದೇವಾತ್ಮ ಪರಿಶುದ್ಧನೇ! ಸೈತಾನಬಲ ಮುರಿ!
ವಿಮುಕ್ತವಾದ ಸಭೆಗೆ ಕೊಡೀಶ ಭಕ್ತಿಯುರಿ!
ನೀ ನೀಗಿಸೆಲ್ಲ ಕಷ್ಟವಂ! ಕೊಡೈ ವಿಶ್ರಾಂತಿಗತಿಯಂ!
ನಮ್ಮಲ್ಲಿ ವಾಸಮಾಡು

**ಮುಕ್ತಾಯದ ಪ್ರಾರ್ಥನೆ**

**ಸಮುದಾಯದ ಆಶೀರ್ವಾದ**

ಸಂತೋಷವೂ ನಿರೀಕ್ಷೆಯೂ ದೇವರ ವಾಗ್ದಾನಗಳೊಂದಿಗೆ ಜೀವದ ಪರಿಪೂರ್ಣತೆಯಲ್ಲಿ ನಮ್ಮ ಹೃದಯಗಳಲ್ಲಿ ವಾಸಿಸಲಿ!
ಈ ಭೂಮಿಯನ್ನು ಆರೈಕೆ ಮಾಡಲು ದೇವರು ನಮಗೆ ಜ್ಞಾನವನ್ನು ದಯಪಾಲಿಸಲಿ.
ನಮ್ಮ ದುರಾಸೆ ಮತ್ತು ನಿಸ್ವಾರ್ಥತೆಯ ನಿಮಿತ್ತ ನಿಂದನೆ ಮತ್ತು ಶೋಷಣೆಗೆ ಒಳಗಾದವರಿಗೆ ನಾವು ನ್ಯಾಯವನ್ನು ನೀಡುವಂತಾಗಲಿ.
ದೇವರ ಸೃಷ್ಟಿಯೊಂದಿಗೆ ನಾವು ಸಮಾಧಾನದಿಂದಲೂ ಸೌಹಾರ್ದತೆಯಿಂದಲೂ ಜೀವಿಸುವಂತಾಗಲಿ.
ನಮ್ಮ ಮನೆಯಾಗಿರುವ ನಮ್ಮ ಜಗತ್ತಿನ ಗಾಯಗಳನ್ನು ನಾವು ಗುಣಪಡಿಸುವಂತೆ ದೇವರು ನಮ್ಮೊಬ್ಬೊಬ್ಬರನ್ನು ಮುಟ್ಟಲಿ.
ಸೃಷ್ಟಿಕರ್ತನೂ, ವಿಮೋಚಕನೂ ಮತ್ತು ನಮ್ಮ ಜೀವದ ಪೋಷಕನೂ ಆಗಿರುವ ದೇವರ ಆಶೀರ್ವಾದವು ಈಗಲೂ ಯಾವಾಗಲೂ ನಮ್ಮೊಂದಿಗಿರಲಿ. ಆಮೆನ್.

**ಅನುಬಂಧ**

**ನಮ್ಮ ಎಫ್ಎಲ್‌ಸಿ ಕಥೆ** (ಸೃಜನಾತ್ಮಕವಾಗಿ ಓದಿ ಮತ್ತು ನಾಟಕೀಕರಿಸಲಾಗಿದೆ)

**ಪರ್ಯಾಯ 1 (ದೀರ್ಘ ಆವೃತ್ತಿ):**

**ನಾಯಕ 2:** ಕನಿಷ್ಠ ನಾಣ್ಯದ ಅನ್ಯೋನ್ಯತೆ (ಎಫ್ಎಲ್‌ಸಿ)ಯು, 1956 ರಲ್ಲಿ ಭಾರತ ದೇಶದ ಒಬ್ಬ ಕ್ರೈಸ್ತ ಮಹಿಳೆಯಾದ ಶಾಂತಿ ಸೊಲೋಮೋನ ಎಂಬವರಿಂದ ಕಲ್ಪಿಸಲಾಗಿತ್ತು. ಶಾಂತಿ, ಯುನೈಟೆಡ್ ಸ್ಟೇಟ್ಸ್ ನ ಪ್ರೆಸ್ಬಿಟೇರಿಯೆನ್ ಮಹಿಳೆಯರಿಂದ ನಡಿಸಲ್ಪಟ್ಟ ಅಂತರ್‌ರಾಷ್ಟ್ರೀಯ ಮಿಶನ್ ತಂಡದ ಭಾಗವಾಗಿದ್ದರು. ಈ ತಂಡವು ಏಶಿಯಾದ ಉದ್ದಗಲಕ್ಕೂ ಪ್ರಯಾಣ ಮಾಡಿ ಎರಡನೆಯ ಮಹಾ ಯುದ್ಧದ ಸಮಯದಲ್ಲಿ ಅನ್ಯಾಯದಿಂದ ಸ್ಪರ್ಶಿಸಲ್ಪಟ್ಟ ಮಹಿಳೆಯರನ್ನು ಸಂಧಿಸಿ ಅವರು ಹೇಳುವದನ್ನು ಆಲಿಸಿದರು. ಈ ತಂಡವು ಹಿಂಸೆ ಮತ್ತು ಅಘಾತ, ಆಳವಾದ ನೋವು ಮತ್ತು ಅವಿಶ್ವಾಸದ ಕಥೆಗಳನ್ನು ಕೇಳಿಸಿಕೊಂಡರು.

**ನಾಯಕ 3:** ಶಾಂತಿಯವರು ಹಾಗೂ ತಂಡ ಜಪಾನಿಗೆ ಹೋದಾಗ, ವಿಮಾನ ನಿಲ್ದಾಣದಲ್ಲಿ ಮೂರು ಜಪಾನಿನ ಮಹಿಳೆಯರು ಅವರನ್ನು ಭೇಟಿಯಾದರು. ಅವರು, ಶಾಂತಿಯವರು ಹಾಗೂ ತಂಡದಲ್ಲಿದ್ದ ಇತರರಿಗೋಸ್ಕರ ಹೂಮಾಲೆಗಳನ್ನು ತಂದಿದ್ದರು, ಅಮೇರಿಕಾದವರಿಗಾಗಿ ಏನನ್ನೂ ತಂದಿರಲಿಲ್ಲ. “ಜನರಲ್ ಮ್ಯಾಕ್‌ಆರ್ಥರ್‌ರವರಿಂದ ಸಾಕಷ್ಟು ಹೊಂದಿದ್ದಾಯಿತು... ನಾವು ಅಮೇರಿಕಾದ ಮಹಿಳೆಯರನ್ನು ತಂಡದಲ್ಲಿ ಸ್ವಾಗತಿಸುವದಿಲ್ಲ”, ಎಂಬದಾಗಿ ಹೇಳಿದರು. ಆ ಭೇಟಿಯಲ್ಲಿ/ಸಂದರ್ಶನದಲ್ಲಿ ಶಾಂತಿಯವರು ಜಪಾನಿನಾದ್ಯಂತ ಹಾನಿಯನ್ನೇ ಕಂಡರು, ಅದರಲ್ಲೂ ವಿಶೇಷವಾಗಿ 1945ನೇ ಇಸ್ವಿಯಲ್ಲಿ ಯುನೈಟೆಡ್ ಸ್ಟೇಟ್ಸ್‌ನ ಸೈನ್ಯದವರು ಹಿರೋಷಿಮಾದ ಮೇಲೆ ಹಾಕಿದ ಬಾಂಬ್ 80,000 ಜನರನ್ನು ಕೂಡಲೇ ಕೊಂದಿತು ಮತ್ತು ನಂತರ ವಿಕಿರಣ ಅಪಾವರಣದಿಂದ ಹತ್ತು ಸಾವಿರದಷ್ಟು ಜನರು ಸತ್ತರು.



**ನಾಯಕ 4:** ಶಾಂತಿಯವರು ತಮ್ಮ ತಂಡದೊಂದಿಗೆ ಫಿಲಿಪ್ಪೀನ್ಸ್ ದೇಶಕ್ಕೆ ಹೋದರು, ಅಲ್ಲಿ ತಮ್ಮ ಸಭೆಯನ್ನು ಪುನಃ ಕಟ್ಟುವದಕ್ಕಾಗಿ ತಮ್ಮ ಆಭರಣಗಳನ್ನು ಮಾರಾಟಮಾಡುತ್ತಿದ್ದ ಫಿಲಿಪಿನೋ ಜನರನ್ನು ಭೇಟಿಯಾದರು. ಅಲ್ಲಿದ್ದ ಸಭೆಯು ಜಪಾನಿನವರ ಆಕ್ರಮಣದ ಸಮಯದಲ್ಲಿ ಭಗ್ನಾವಶೇಷವಾಗಿ ಕಡಿಮೆಯಾಗಿಸಲ್ಪಟ್ಟಿತ್ತು. ಶಾಂತಿಯವರು ಫಿಲಿಪಿನೋ ಮಹಿಳೆಯರಿಗೆ ಸಂಧಾನದ ಮಾತುಕತೆಗಳಿಗಾಗಿ ಒಂದುವೇಳೆ ಜಪಾನಿನ ಮಿಶನ್ ತಂಡವನ್ನು ಸ್ವೀಕರಿಸಿಕೊಳ್ಳುವ ವಿಷಯವನ್ನು ಕೇಳಿದಾಗ ಅವರು, “ಈ ಜೀವಮಾನ ಕಾಲದಲ್ಲಿ ಸಾಧ್ಯವಿಲ್ಲ”, ಎಂದು ಹೇಳಿದರು.

**ನಾಯಕ 5:** ತಂಡವು ದಕ್ಷಿಣ ಕೊರಿಯಾಗೆ ಹೋದಾಗ, ಶಾಂತಿಯರ ವೀಸಾ ಅರ್ಜಿಯು ನಿರಾಕರಿಸಲ್ಪಟ್ಟಿದ್ದರಿಂದ ಅವರು ಫಿಲಿಪ್ಪೀನ್ಸ್‌ನಲ್ಲಿ ಹಿಂದುಳಿಯಬೇಕಾಯಿತು. ಆ ಸಮಯದಲ್ಲಿ ಭಾರತ ಹಾಗೂ ದಕ್ಷಿಣ ಕೊರಿಯಾದ ರಾಜತಾಂತ್ರಿಕ ಸಂಬಂಧಗಳು ಬಹು ಉದ್ವಿಗ್ನ ಸ್ಥಿತಿಯಲ್ಲಿತ್ತು. ಕೊರಿಯಾದ ಯುದ್ಧದ ನಂತರ ಉತ್ತರ ಹಾಗೂ ದಕ್ಷಿಣ ಕೊರಿಯಾದ ಗಡಿಯನ್ನು ರಾಜಿಮಾಡಲು ಭಾರತದ ಪ್ರಧಾನ ಮಂತ್ರಿಯಾಗಿದ್ದ ಶ್ರೀ ಜವಾಹರಲಾಲ್ ನೆಹರುರವರು ತಟಸ್ಥ ವಿಶ್ವ ನಾಯಕನಾಗಬೇಕೆಂಬ ಸಂಯುಕ್ತ ರಾಷ್ಟ್ರಗಳ ಮನವಿಯನ್ನು ಸ್ವೀಕರಿಸಿಕೊಂಡರು. ಅನೇಕ ಕೊರಿಯಾದ ಜನರು ತಮ್ಮ ರಾಷ್ಟ್ರ ವಿಭಾಗವಾಗುವದನ್ನು ಬಯಸದೇ ಇದ್ದಾಗ್ಯೂ ಪ್ರಧಾನ ಮಂತ್ರಿ ನೆಹರುರವರು 38ನೇ ಸಮಾನಾಂತರದಲ್ಲಿ

ಗಡಿಯನ್ನು ಇತ್ಯರ್ಥಪಡಿಸಿದರು. ಆದಕಾರಣ, ಭಾರತದ ನಿವಾಸಿಯಾದ ಶಾಂತಿಯವರಿಗೆ ದಕ್ಷಿಣ ಕೋರಿಯಾದಲ್ಲಿ ಸ್ವಾಗತ ದೊರೆಯಲಿಲ್ಲ.

**ನಾಯಕ 2:** ನೋವು ಮತ್ತು ಅಸಮಾಧಾನದ ಕಥೆಗಳನ್ನು ಕೇಳಿಸಿಕೊಂಡ ನಂತರ ಮತ್ತು, ಸ್ವತಃ ತಾನೇ ವಿಭಾಗಗಳನ್ನೂ ಗಡಿಗಳನ್ನೂ ಅನುಭವಿಸಿದ ನಂತರ ಶಾಂತಿಯವರು ರಾಷ್ಟ್ರಗಳ ಮತ್ತು ಜನರ ನಡುವೆ ಸಮಾಧಾನ ನ್ಯಾಯ ಮತ್ತು ಸಂಧಾನಕ್ಕಾಗಿ ಪ್ರಾರ್ಥಿಸಿದರು. ಕ್ರೈಸ್ತ ಮಹಿಳೆಯರು ವ್ಯಕ್ತಿಗತವಾಗಿ ಈ ಸಮಸ್ಯೆಗಳ ಕುರಿತು ಪ್ರಾರ್ಥಿಸುವದಾದರೆ, ಲೋಕದಾದ್ಯಂತ ಜನರಿಗೂ ಸ್ಥಳಗಳಿಗೂ ಹರಿದುಹೋಗುವ ರೀತಿಯಲ್ಲಿ ಅವರು ಸಮಾಧಾನ, ನ್ಯಾಯ ಮತ್ತು ಸಂಧಾನದ ಅಲೆಗಳನ್ನು ಸೃಷ್ಟಿಸಬಹುದು ಎಂದು ನಂಬಿದ್ದರು.

*13ರಲ್ಲಿ 12ನೇ ಪುಟ*

**ನಾಯಕ 3:** ಅವರು ಮತ್ತೊಬ್ಬರಂದಿಗೆ ಯಾವಾಗೆಲ್ಲಾ ಸಂಘರ್ಷದಲ್ಲಿರುತ್ತಾರೋ ಆಗ ಪ್ರಾರ್ಥಿಸುವದಾಗಿ ಶಾಂತಿಯವರು ಮತ್ತು ತಂಡದವರು ಪ್ರಮಾಣ ಮಾಡಿದರು. ತಮ್ಮನ್ನು ಗಾಯಗೊಳಿಸಿದವರಿಗೋಸ್ಕರ ಪ್ರಾರ್ಥನೆ ಮಾಡುವದಕ್ಕೆ ಒಪ್ಪಿಸಿಕೊಟ್ಟರು ಮತ್ತು ತಮಗೆ ಬೇಕಾಗಿರುವ ಬಲಕ್ಕಾಗಿಯೂ, ತಿಳುವಳಿಕೆಯನ್ನು ಹೊಂದಲು ಮತ್ತು ಕ್ಷಮಾಪಣೆಯನ್ನು ನೀಡಲು ಕೃಪೆಗಾಗಿಯೂ ಪ್ರಾರ್ಥಿಸಲು ಒಪ್ಪಿಸಿಕೊಟ್ಟರು. ಅದರ ಜೊತೆಗೆ ಅವರು ಲೋಕದಾದ್ಯಂತ ಸಮಾಧಾನಕ್ಕಾಗಿ, ನ್ಯಾಯಕ್ಕಾಗಿ ಮತ್ತು ಸಂಧಾನಕ್ಕಾಗಿ ಪ್ರಾರ್ಥಿಸಲು ಒಪ್ಪಿಸಿಕೊಟ್ಟರು.

**ನಾಯಕ 4:** ಪ್ರತಿಯೊಂದು ಪ್ರಾರ್ಥನೆಯ ಗುರುತಾಗಿ ತಮ್ಮ ಚಲಾವಣೆಯ ಹಣಕಾಸಿನಲ್ಲಿ ಅತೀ ಕನಿಷ್ಠವಾದ ನಾಣ್ಯ ಒಂದನ್ನು ಬದಿಗೆತ್ತಿಡಲು ಒಪ್ಪಿಕೊಂಡರು. ಕೇವಲ ಕನಿಷ್ಠವಾದ ನಾಣ್ಯವನ್ನು ಮಾತ್ರ ಅರ್ಪಿಸುತ್ತಿದ್ದರು ಯಾಕಂದರೆ ಎಲ್ಲಾ ರೀತಿಯ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಮಹಿಳೆಯು ಸಹ ಉದಾರಿಯಾಗಿ ಈ ಸಮಾಧಾನ ಪಡಿಸುವ ಕಾರ್ಯದಲ್ಲಿ ಭಾಗವಹಿಸಬಹುದು.

**ನಾಯಕ 5:** ಇಂದು ಎಫ್ಎಲ್‌ಸಿ ಯು ಪ್ರಾರ್ಥನೆಗಳೊಂದಿಗೂ ಮತ್ತು ಲಿಂಗ ಸಮಾನತೆ ಹಾಗೂ ಮಾನವ ಘನತೆಯನ್ನು ಬೆಂಬಲಿಸುವ ಯೋಜನೆಗಳಿಗೆ ಹರಿಯುವ ಕನಿಷ್ಠ ನಾಣ್ಯಗಳೊಂದಿಗೂ ಶಾಂತಿ ನ್ಯಾಯ ಮತ್ತು ಸಂಧಾನಕ್ಕಾಗಿ ಪ್ರಾರ್ಥಿಸುವ ಜಾಗತಿಕ ಸಾರ್ವತ್ರಿಕ ಚಳುವಳಿಯಾಗಿರುತ್ತದೆ.

**ಪರ್ಯಾಯ 2 (ಚಿಕ್ಕದಾದ ಆವೃತ್ತಿ):**

**ನಾಯಕ 2:** ಕನಿಷ್ಠ ನಾಣ್ಯದ ಅನ್ಯೋನ್ಯತೆ (ಎಫ್ಎಲ್‌ಸಿ)ಯು, ಸಮಾಧಾನ, ನ್ಯಾಯ ಮತ್ತು ಸಂಧಾನಕ್ಕಾಗಿ ಜಾಗತಿಕ ಸಾರ್ವತ್ರಿಕ ಪ್ರಾರ್ಥನಾ ಚಳುವಳಿಯಾಗಿರುತ್ತದೆ. ಈ ಚಳುವಳಿಯ ಮೂಲಕ ಲೋಕದಾದ್ಯಂತ ಮಹಿಳೆಯರು ಐಕ್ಯತೆಯಿಂದಿರಲು ಪ್ರಯತ್ನಿಸುತ್ತಾರೆ ಮತ್ತು ಸಮಾಧಾನಕ್ಕಾಗಿ ಪ್ರಾರ್ಥಿಸಲು ಹಾಗೂ ಕೆಲಸ ಮಾಡಲು ಜ್ಞಾಪಿಸಲ್ಪಡುತ್ತಾರೆ.

**ನಾಯಕ 3:** ಎಫ್ಎಲ್‌ಸಿ ಗೆ ಮೂಲ ವಿಚಾರವು ಭಾರತದ ಶಾಂತಿ ಸೊಲೋಮೋನ್ ಎಂಬವರಿಗೆ ದೇವರಿಂದ ಬಂದ ದರ್ಶನವಾಗಿ ಹೊರಹೊಮ್ಮಿತು. ಶಾಂತಿಯವರು 1956 ರಲ್ಲಿ ಏಶಿಯಾದ ಉದ್ದಗಲಕ್ಕೂ

*13ರಲ್ಲಿ 13ನೇ ಪುಟ*

ಪ್ರಯಾಣಮಾಡಿದ ವಿವಿಧ ದೇಶಗಳಿಂದ ಬಂದ ಏಳು ಮಹಿಳೆಯರ ಗುಂಪಾದ ಪೆಸಿಫಿಕ್ ಮಿಶನ್ ಟೀಮ್‌ನ ಭಾಗವಾಗಿದ್ದರು. ಪ್ರೆಸ್ಬಿಟೇರಿಯನ್ ಚರ್ಚ್ ಆಫ್ ದಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ

(ಪಿಸಿಯುಎಸ್‌ಏ) ದ ಮಹಿಳೆಯರ ಪರವಾಗಿ ಡಾ|| ಮಾರ್ಗ್‌ರೆಟ್ ಶ್ಯಾನ್ನನ್ ಎಂಬವರಿಂದ ಈ ಮಿಶನ್ ಆಯೋಜಿಸಲ್ಪಟ್ಟಿತ್ತು. ಈ ಮಿಶನ್ ಅವಧಿಯಲ್ಲಿ ಶಾಂತಿಯವರು ಎರಡನೆಯ ಮಹಾ ಯುದ್ಧದ ಸಮಯದಲ್ಲಿ ನಿಂದನೆ ಮತ್ತು ಅಘಾತವನ್ನು ಅನುಭವಿಸಿದ ಏಶಿಯಾದ ಮಹಿಳೆಯರಿಂದ ಕಥೆಗಳನ್ನು ಆಲಿಸಿದರು. ಅಂದಿನ ಸಮಯದಲ್ಲಿ ಭಾರತ ಮತ್ತು ದಕ್ಷಿಣ ಕೊರಿಯಾ ನಡುವಿನ ಪ್ರತಿಕೂಲವಾದ ರಾಜತಂತ್ರಿಕ ಸಂಬಂಧಳ ನಿಮಿತ್ತ ಶಾಂತಿಯವರಿಗೆ ದಕ್ಷಿಣ ಕೊರಿಯಾದ ವೀಸಾ ನಿರಾಕರಿಸಲ್ಪಟ್ಟಿತು. ಆದಕಾರಣ, ಅವರು ಫಿಲಿಪೀನ್ಸ್‌ನಲ್ಲಿಯೇ ಉಳಿದು ತನ್ನ ಅನುಭವಗಳ ಮತ್ತು ತಾನು ಕೇಳಿದ ಕಥೆಗಳ ಕುರಿತು ಪ್ರಾರ್ಥಿಸಿದರು.

**ನಾಯಕ 4:** ತಂಡದವರು ಪುನಃ ಶಾಂತಿಯವರನ್ನು ಫಿಲಿಪೀನ್ಸ್‌ನಲ್ಲಿ ಭೇಟಿಯಾದಾಗ, ಶಾಂತಿಯವರು, ಕ್ರೈಸ್ತ ಮಹಿಳೆಯರು ಪ್ರತಿ ರಾಷ್ಟ್ರೀಯ ಗಡಿಯನ್ನೂ ಮತ್ತು ಮಾನ ನಿರ್ಮಿತ ವಿಭಾಗವನ್ನೂ ಮೀರುವ ಸಮಾಧಾನಕ್ಕಾಗಿ ಪ್ರಾರ್ಥಿಸುವ ತಮ್ಮ ದರ್ಶನವನ್ನು ಹಂಚಿಕೊಂಡರು. ಎಲ್ಲಾ ಕ್ರೈಸ್ತ ಮಹಿಳೆಯರು ತಮ್ಮ ಸ್ವಂತ ಜೀವಿತಗಳಲ್ಲಿ ಹಾಗೂ ಲೋಕದ ಎಲ್ಲಾ ಕಡೆಗಳಲ್ಲಿ ಸಮಾಧಾನಕ್ಕಾಗಿ, ನ್ಯಾಯಕ್ಕಾಗಿ ಮತ್ತು ಸಂಧಾನಕ್ಕಾಗಿ ಪ್ರಾರ್ಥಿಸಬೇಕು ಹಾಗೂ ಪ್ರತಿಯೊಂದು ಪ್ರಾರ್ಥನೆಗೆ ಗುರುತಾಗಿ ಒಂದು ನಾಣ್ಯವನ್ನು ಬದಿಗಿರಿಸುವಂತೆ ಶಾಂತಿಯವರು ಅಪೇಕ್ಷಿಸಿದರು. ಎಲ್ಲಾ ಮಹಿಳೆಯರು ತಮ್ಮ ಚಲಾವಣೆಯ ಹಣಕಾಸಿನಲ್ಲಿ ಅತೀ ಕನಿಷ್ಠವಾದ ನಾಣ್ಯವನ್ನು ಪ್ರಸ್ತಾಪಿಸಿದರು ಯಾಕಂದರೆ ಎಲ್ಲಾ ರೀತಿಯ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಮಹಿಳೆಯರು ಉದಾರಿಯಾಗಿರಲು ಹಾಗೂ ಸಮಾಧಾನ ಪಡಿಸುವ ಈ ಕಾರ್ಯದಲ್ಲಿ ಭಾಗವಹಿಸಲು ಅವಕಾಶಗಳನ್ನು ಒದಗಿಸಬಹುದಾಗಿತ್ತು.

**ನಾಯಕ 5:** ಈ ನ್ಯಾಯ, ಸಮಾಧಾನ ಮತ್ತು ಸಂಧಾನದ ಯೋಜನೆಯನ್ನು ಪ್ರಾರಂಭಿಸಲು ತಮ್ಮ ಪ್ರಯಾಸಗಳನ್ನೂ ಸಂಪನ್ಮೂಲಗಳನ್ನೂ ಒಂದುಗೂಡಿಸಲು ಶಾಂತಿಯವರು ಏಶಿಯಾದ ಕ್ರೈಸ್ತ ಮಹಿಳೆಯರಿಗೂ **ಪಿಸಿಯುಎಸ್‌ಏ** ದ ಮಹಿಳೆಯರಿಗೂ ಸವಾಲು ಹಾಕಿದರು. ತಂಡವು ಶಾಂತಿಯವರ ಸವಾಲನ್ನು ಸ್ವೀಕರಿಸಿದರು ಮತ್ತು **ಎಫ್‌ಎಲ್‌ಸಿ** ಯು ಹುಟ್ಟಿಕೊಂಡಿತು.